ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಬುಧವಾರ, ದಿನಾಂಕ: 09ನೇ ಡಿಸೆಂಬರ್, 2020

ಕಂದಾಯ ಇಲಾಖೆಯಲ್ಲಿನ ಭ್ರಷ್ಟಾಚಾರ ನಿಗ್ರಹಕ್ಕೆ ಕ್ರಮವಹಿಸುವ ಬಗ್ಗೆ

ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

174 (315) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಂದಾಯ ಇಲಾಖೆಯಲ್ಲಿ ಅದರಲ್ಲೂ ಮುಖ್ಯವಾಗಿ ಜಿಲ್ಲಾಧಿಕಾರಿಗಳು ಅಸಿಸ್ಟೆಂಟ್ ಕಮೀಷನರ್, ತಹಶೀಲ್ದಾರ್‌ಗಳ ಹಾಗೂ ಸಬ್ ರಿಜಿಸ್ಟ್ರಾರ್ ರವರುಗಳ ಕಛೇರಿಗಳಲ್ಲಿ ನಡೆಯುವ ಭ್ರಷ್ಟಾಚಾರಗಳನ್ನು ತಡೆಯಲು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರದಲ್ಲಿರುವ ವ್ಯವಸ್ಥೆ ಏನು ;

(ಆ) ದೂರು ಬಂದಾಗ ಮಾತ್ರ ಲೋಕಾಯುಕ್ತ, ಎ.ಸಿ.ಬಿ. ಅಧಿಕಾರಿಗಳು ದಾಳಿ ಮಾಡುತ್ತಿದ್ದು, ಸದರಿ ಕಛೇರಿಗಳಲ್ಲಿ ದಿನನಿತ್ಯ ಭ್ರಷ್ಟಾಚಾರದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಸರ್ಕಾರ ಈ ಬಗ್ಗೆ ಗಮನ ಹರಿಸಿ ಧಿಡೀರ್ ತಪಾಸಣೆ ನಡೆಸಿ ಕ್ರಮ ಕೈಗೊಳ್ಳಲು ವಿಶೇಷ ಕಾರ್ಯಕ್ರಮ ಏನಾದರೂ ರೂಪಿಸುತ್ತದೆಯೇ ;

(ಇ) ಲೋಕಾಯುಕ್ತ ಅಥವಾ ಎ.ಸಿ.ಬಿ ದಾಳಿ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಬೇಕೆಂದು ವರದಿ ಕೊಟ್ಟರು ಅನುಮತಿ ನೀಡಲು ವಿಳಂಬ ನೀತಿ ಅನುಸರಿಸುತ್ತಿರುವುದೇಕೆ;

(ಈ) ದಾಳಿಗೊಳಗಾಗಿ ಅಮಾನತ್ತಿನಲ್ಲಿರುವ ಅಧಿಕಾರಿಗಳನ್ನು ಅವರು ದೋಷಮುಕ್ತರಾಗುವ ಮುನ್ನವೇ ಮತ್ತೇ ಸರ್ಕಾರಿ ಸೇವೆಗೆ ನೇಮಿಸುತ್ತಿರುವುದು ಸರಿಯಾದ ಕ್ರಮವೇ; ಇದನ್ನು ತಪ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೇ ?